ಸುಂದರ್, ಬೆಂಗಳೂರು

*ಆನೆ ಇದ್ದರೂ ಸಾವಿರ, ಸತ್ತರೂ ಸಾವಿರ. ಭ್ರಷ್ಟ ರಾಜಕಾರಣಿ?*



ಇದ್ದರೂ ಸಾವಿರ ಕೋಟಿ ಹಗರಣ, ಸತ್ತರೂ ಸಾವಿರ ಕೋಟಿ ಹಗರಣ.

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು

*ಎಲ್ಲರನ್ನೂ ಸಂತೋಷಪಡಿಸುವ ಗುಟ್ಟು ನಮ್ಮಲ್ಲೇನಾದರೂ ಇದ್ದಿದ್ದರೆ?*

ನಾವು ಅರಳಿದ ಸುಮವೋ, ಬೇಸಿಗೆಯಲ್ಲಿನ ಅಪರೂಪದ ತಂಗಾಳಿಯೋ ಆಗಿರುತ್ತಿದ್ದೆವು.

ಬಿ. ಚಂದ್ರೇಗೌಡ, ಬೆಂಗಳೂರು

*ಲಂಚ ಕೊಡುವುದನ್ನು ಕೈ ಬೆಚ್ಚಗೆ ಮಾಡುವುದು ಅಂತಾರಲ್ಲ, ಯಾಕೆ?*

ಲಂಚ ಎಂದಿಗೂ ಹೊಡೆಯುವುದು ತಾನೇ... ಹೊಡೆದಾಗ ಬೆಚ್ಚಗಾಗುವುದು ಸಹಜ.

ಸುಜ್ಞಾನಾಚಾರ್ಯ ಕೆ.ಪಿ., ಕಲಿಕೆರೆ

*ನಾವು ಬೇರೆಯವರನ್ನು ಕತ್ತೆ, ನಾಯಿ, ಹಂದಿ, ಗೂಬೆ ಎಂದೆಲ್ಲ ಬೈಯುವುದೇಕೆ?*

'ತನ್ನಂತೆ ಪರರ ಬಗೆದೊಡೆ....' ಎಂಬುದನ್ನು ಪಾಲಿಸುವ ಸಲುವಾಗಿ.

ನಳಿನಿ ಆರ್. ಮಾಗಲ್, ಸಕಲೇಶಪುರ

*ರೈತರೂ ವರ್ಕ್ ಫ್ರಂ ಹೋಮ್ ಮಾಡಬಹುದೆ?*



ಅವರದು ವರ್ಕ್ ಫ್ರಂ ಹೋಮೇ! ಮಣ್ಣಿನ ಮಕ್ಕಳಿಗೆ ಮಣ್ಣೇ ಹೋಮ್.

ಮಹಾವೀರ ಕಾಸರ, ಶಿವಮೊಗ್ಗ

*ಜೀವನ ಸಾಗರದ ಆಳ, ಅಗಲ ಎಷ್ಟು?*

ನಿಃಸ್ವಾರ್ಥ ಪ್ರೀತಿಯಷ್ಟು ಆಳ, ಅಂತಃಕರಣದಷ್ಟು ಅಗಲ.

ಎಚ್. ಆನಂದಕುಮಾರ್, ಚಿತ್ರದುರ್ಗ

*ಇಲ್ಲಿ ಕೆಲವರು ರಾಗಿ-ಗೋಧಿ ತಿನ್ನಬೇಡಿ, ಡೇಂಜರ್, ಅನ್ನುತ್ತಿದ್ದಾರೆ. ಮತ್ತೇನು ತಿನ್ನಲಿ ರಾಮ ಶಿವಾ?*

ಅವರು ಹಾಗೆ ಹೇಳುವುದನ್ನು ನಿಲ್ಲಿಸುವವರೆಗೆ ಅವರ ತಲೆ ತಿನ್ನಿ.

ವಿ. ಹೇಮಂತಕುಮಾರ್, ಬೆಂಗಳೂರು

*ನದಿ ಜೋಡಣೆ ಮಾಡಿದಂತೆ ಬೆಂಗಳೂರಿನ ಗುಂಡಿಗಳನ್ನೆಲ್ಲ ಜೋಡಣೆ ಮಾಡಿದರೆ ಹೇಗಿರುತ್ತೆ ಸಾರ್?*

ಆಹಾ! ಜೊತೆಗೊಂದಿಷ್ಟು ಟ್ಯೂಬುಗಳನ್ನೂ ಹಾಕಿಬಿಟ್ಟರೆ ಮಳೆಗಾಲದಲ್ಲಿ ತೇಲುತ್ತಾ ಮನೆ ಸೇರಲು ಅನುಕೂಲ.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

*ಇತಿಹಾಸ ಗೊತ್ತಿಲ್ಲದವನು ಇತಿಹಾಸ ಸೃಷ್ಟಿಸಲಾರನಂತೆ. ನಿಜವೆ?*

ಹಾಗೇನಿಲ್ಲ; ರೆಸ್ಪಿರೇಟರಿ ಸಿಸ್ಟಮ್ ತಿಳಿಯದವರೂ ತೊಂದರೆಯಿಲ್ಲದೆ ಉಸಿರಾಡುತ್ತಿಲ್ಲವೆ!

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ

*ನೋವಾದರೆ, ಬಿದ್ದರೆ ಅಮ್ಮ ಎನ್ನುತ್ತೇವೆ, ಅಪ್ಪ ಅನ್ನುವುದಿಲ್ಲ. ಯಾಕೆ?*

ಹೆರಿಗೆಯ ನೋವು ಅನುಭವಿಸಿದವಳಿಗೆ ನೋವಿನ ಅರ್ಥ ತಿಳಿದಿರುತ್ತದೆ ಎಂದು.

ಬಾ.ರಂ. ಸುರೇಶ್, ಶಿವಮೊಗ್ಗ

*ದಾರಿ ತಪ್ಪಿದ ಮಗನನ್ನು ದಾರಿಗೆ ತರಬಹುದಂತೆ. ದಾರಿ ತಪ್ಪಿದ ಮಗಳನ್ನು ದಾರಿಗೆ ತರಲಾಗದಂತೆ. ಏಕೆ ಶಿವಾ?*

ಮಗಳನ್ನು ಪದೇ ಪದೇ ದಾರಿ ತಪ್ಪಿಸಲು ಘಟಿಂಗರು ಕ್ಯೂ ನಿಂತಿರುತ್ತಾರಲ್ಲ!

ಜೆ.ಸಿ ರವಿಕುಮಾರ್, ಜಯಸುವರ್ಣಪುರ

*ಪ್ರಾಮಾಣಿಕ ದೇಶಭಕ್ತನಾಗಲು ಬ್ರಹ್ಮಚಾರಿಯಾಗಿರಬೇಕೋ, ಸಂಸಾರಿಯಾಗಿರಬೇಕೋ?*

ಪರ್ಸ್‌ನಿಂದ ಮಿಡಿಯದೆ ಪಲ್ಸ್‌ನಿಂದ ಮಿಡಿಯುವ ಯಾರಾದರೂ ಆದೀತು.

ಹೆಚ್.ವಿ. ಶ್ರೀಧರ್, ಬೆಂಗಳೂರು

*ದಶಾವತಾರದಲ್ಲಿ 'ಲಂಚಾವತಾರ'ವನ್ನೂ ಒಂದು ಅವತಾರವಾಗಿ ಸೇರಿಸಬೇಕೆಂದು ರಾಜಕಾರಣಿಗಳು ಹೇಳುತ್ತಿರುವರಲ್ಲಾ...?*

'ಆಗದು. ಅದರ ಕಾಪಿರೈಟ್ಸ್ ನನ್ನದು' ಎಂದರಂತೆ ಡಾ. ಮಾಸ್ತರ್ ಹಿರಣ್ಣಯ್ಯ.

## ಬಹುಮಾನಿತ ಪ್ರಶ್ನೆ

ಟಿ.ಎಂ. ಮಾನಪ್ಪ, ಶಿವಮೊಗ್ಗ

*ದೇಹದ ತೂಕಕ್ಕೂ, ಮಾತಿನ ತೂಕಕ್ಕೂ ಇರುವ ವ್ಯತ್ಯಾಸವೇನು?*

ದೇಹದ ತೂಕ ಇರುವವನಿಗೆ ಬಿಪಿ ಟ್ರೀಟ್‌ಮೆಂಟ್; ಮಾತಿನ ತೂಕ ಇರುವವನಿಗೆ ವಿಐಪಿ ಟ್ರೀಟ್‌ಮೆಂಟ್.

ಓಂ ಚನ್ನೇಶ್, ಭದ್ರಾವತಿ

*ಯೋಗಿಗಳಿಗೂ, ಭೋಗಿಗಳಿಗೂ ವ್ಯತ್ಯಾಸವೇನು ಸಾರ್?*

ಯೋಗಿಗಳು ಧ್ಯಾನಾಸಕ್ತರು, ಭೋಗಿಗಳು ಉದ್ಯಾನಾಸಕ್ತರು.

ಎಂ.ಎ. ಕುಮಾರ್, ಬೆಂಗಳೂರು

*ಆಸ್ತಿ ಸರಿ, ಪಾಸ್ತಿ?*

ಮಕ್ಕಳಿಗೆ ಆಸ್ತಿಯಾಯಿತು; ಗಿಕ್ಕಳಿಗೆ ಕೊಡಲು ಬೇಕಲ್ಲ!

ಕೆ.ಎಂ. ವಿಭೂತಿ, ಹರಿಹರ

2018ರ ಚುನಾವಣೆಯಲ್ಲಿ ಬಿಜೆಪಿಯಿಂದ ಕತ್ತೆ ನಿಂತರೂ ಗೆಲ್ಲುವುದೆಂದು ಬ್ರಹ್ಮಾಂಡಿಗಳೊಬ್ಬರು ಹೇಳಿದ್ದಾರಲ್ಲ...?



ತಿಳಿಯಿತು. ಅವರು ಎಲೆಕ್ಷನ್‌ಗೆ ನಿಲ್ಲುವವರಿದ್ದಾರೆ!

ಕೆ.ಯಂ. ವೀರೇಶ್, ಕೂಡ್ಲಿಗಿ

*ಬಿಗ್‌ಬಾಸ್ ಮನೆ ನನಗೆ ಹಾಸ್ಯಾಸ್ಪದವಾಗಿ ತೋರುತ್ತದಲ್ಲ ಬಾಸ್?*

ನೀವೇ ವಾಸಿ. ನನಗೆ ಅದು ಪಳಗಿಸಲು ತಂದ ಸಿಂಗಳಿಕ, ಗೊರಿಲ್ಲಾಗಳ ಬೋನಿನಂತೆ ಕಾಣುತ್ತದೆ.

ವಿ. ಹಮೀದ್, ವಿಟ್ಲ

*ಮುದುಕರೆಲ್ಲ ವಿವಾಹವಾಗತೊಡಗಿದ್ದಾರೆ. ಯುವಕರ ಗತಿ?*

ಕೊಂಚ ಕಾಯ್ದು ವಿಧವಾ ವಿವಾಹವಾಗಲು ತಯಾರಾಗಿ.

■ ರಾಮ್